

ಅಮೆರಿಕದ 70 ವರ್ಷದ ಕ್ಯಾಥಿ ಜಂಗ್ ಕಿರು ಸೊಂಟಕ್ಕಾಗಿ ಗಿನ್ನೆಸ್ ದಾಖಲೆ ಹೊಂದಿದಾಕೆ. ಈಕೆಯ ಸೊಂಟದ ಅಳತೆ 15 ಇಂಚು. 22ರ ವಯಸ್ಸಿನಲ್ಲಿ ಮದುವೆಯಾದಾಗ 24 ಇಂಚು ಇತ್ತಂತೆ. ಬಿಗಿ ಒಳ ಉಡುಪು ತೊಟ್ಟು ಕ್ರಮೇಣ 15 ಇಂಚಿಗೆ ಇಳಿಸಿದಾಕೆ. ಮಹರಾಯ್ತಿಗೆ ಸೈಜ್ ಝೀರೊ ಬಗ್ಗೆ ಗೊತ್ತಿಲ್ಲ ಎನಿಸುತ್ತದೆ.

ಚೀನಾದಲ್ಲಿ ಈಗ 'ಸಸ್ಯಾಹಾರಿಗಳ ಹಬ್ಬ'. ಎರಡು ಶತಮಾನಗಳ ಹಿಂದೆ ಯಾವುದೋ ಭೀಕರ ಕಾಯಿಲೆ ಬಂದಾಗ ಸಸ್ಯಾಹಾರದಿಂದ ಚೇತರಿಸಿಕೊಂಡಿದ್ದ ನೆನಪಿಗೆ ಈ ಹಬ್ಬವಂತೆ. ಆದರೆ ಹಬ್ಬದಲ್ಲಿ ಮಾಂಸ, ರಕ್ತದ್ದೇ ಕಾರುಬಾರು. ಚಾಕು ಚೂರಿಗಳ ಅಲಂಕಾರ. ಕಾಯಿಲೆಯಮ್ಮನಿಗೆ ರಕ್ತದ ತರ್ಪಣ. ಕೆಲವರು ದೇಹಕ್ಕೆ ಪಟಾಕಿ ಸರ ಕಟ್ಟಿಕೊಂಡು ಬೆಂಕಿ ಹಚ್ಚಿಕೊಂಡರಂತೆ.





ಕಲಾವಿದನ ಕಲ್ಪನೆಗೆ ಕೊನೆಯೇ ಇಲ್ಲ. ಚೀನಾದಲ್ಲಿ ಕಲಾವಿದನೊಬ್ಬ ಪಾಯಿಖಾನೆ ಬೇಸಿನ್ ಸಂಗ್ರಹಿಸುತ್ತ ಹೋದ. ಕೊನೆಗೆ ನೂರು ಮೀಟರ್ ಉದ್ದಕ್ಕೆ ನಿಲ್ಲಿಸಿ ಪ್ರದರ್ಶನ ಮಾಡಿದ. ಪುಕ್ಕಟೆ ಸಂಗ್ರಹಿಸಿದ ಬೇಸಿನ್‌ಗಳಿಗೆ ಟಿಕೆಟ್ ಇಟ್ಟು ಹಣ ಸಂಗ್ರಹಿಸಿದ.

ಚೀನಾದ 'ಮಂಗ ಮಾನವ' ಯು ಇಡೀ ಶರೀರಕ್ಕೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳಲು ಹೊರಟಿದ್ದಾನೆ. ಟಿವಿ ಧಾರಾವಾಹಿಯಲ್ಲಿ ಮಂಗನ ಪಾತ್ರ ಗಿಟ್ಟಿಸಿಕೊಳ್ಳಲು ವಿಫಲನಾದ ಯು ಮುಖವನ್ನು ಮಂಗನಂತೆ ಮಾಡಿಸಿಕೊಂಡು ಆ ಟಿವಿ ನಿರ್ದೇಶಕನಿಗೆ ಸೆಡ್ಡು ಹೊಡೆಯುವುದಾಗಿ ಹೇಳಿಕೊಂಡಿದ್ದಾನೆ. ಆದರೆ ಕೂದಲು ಕೀಳಿಸಿಕೊಳ್ಳುವುದ್ಯಾಕೊ!





ಅಮೆರಿಕ ಅಧ್ಯಕ್ಷ ಒಬಾಮ ಚುನಾವಣಾ ಪ್ರಚಾರದ ವೇಳೆ ಪದೇ ಪದೇ 'ಬನಾನಾ.. ಬನಾನಾ..' ಎಂದು ಪಿಸು ನುಡಿಯುತ್ತಿದ್ದರಂತೆ. ಅದಕ್ಕೇ ಈಗ ಅಂತರ್‌ಜಾಲದಲ್ಲಿ ಈ ಚಿತ್ರ ಹರಿದಾಡುತ್ತಿದೆ.

ಮನುಷ್ಯನ ರಕ್ತ ಹೀರುವ ಇಂಬಳ ಕಳ್ಳನನ್ನು ಹಿಡಿದು ಕೊಡುವುದೆಂದರೆ.. ಸಿಡ್ನಿಯಲ್ಲಿ ವೃದ್ಧೆಯೊಬ್ಬಳ ಮನೆಗೆ ನುಗ್ಗಿದ ಕಳ್ಳ ಲಾಕರ್ ಒಡೆದು ಹಣ ಹಾಗೂ ಒಡವೆ ಕದ್ದಿದ್ದ. ಲಾಕರ್ ಬಳಿ ಇದ್ದ ಇಂಬಳ ಕಳ್ಳನ ಕಾಲಿಗೆ ಕಚ್ಚಿ ರಕ್ತ ಕುಡಿದಿತ್ತು. ಪೊಲೀಸರು ಈ ಸಾಕ್ಷಿಯನ್ನೇ ಹಿಡಿದು ಕಳ್ಳನ ರಕ್ತದ ಡಿಎನ್‌ಎ ಹೋಲಿಸಿ 8 ವರ್ಷಗಳ ನಂತರ ಕಳ್ಳನನ್ನು ಬಂಧಿಸಿದರು. ಈಗ ಕಳ್ಳ ಕ್ಯಾನನ್ ಇಹಲೋಕ ತ್ಯಜಿಸಿದ ಇಂಬಳಕ್ಕೆ ಹಿಡಿ ಶಾಪ ಹಾಕುತ್ತ ಜೈಲಿನಲ್ಲಿದ್ದಾನೆ.

ಕೊಲೊರೆಡೋದಲ್ಲಿ ನಿಂತಿದ್ದ ಕಾರಿನ ಸೈರನ್ ಮೊಳಗಿತು. ಪೊಲೀಸ್‌ಗೆ ದೂರು ಹೋಯ್ತು. ಕೈಕೋಳ ಸಮೇತ ಬಂದ ಪೊಲೀಸರು ಇನ್ನೂ ದೊಡ್ಡ ಕೈಕೋಳ ತರಬೇಕಿತ್ತು ಎಂದು ಕೈಕೈ ಹಿಸುಕಿಕೊಂಡರು. ಆಹಾರ ಹುಡುಕಿ ಕಾರೊಳಗೆ ಹೊಕ್ಕ ಕರಡಿ ದಿಗಿಲಿನಿಂದ ಸೈರನ್ ಒದುಮಿತ್ತು.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65